# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ.ಕಾ.ಕಾ.ನಿ.ಅ./ಕೋ.ಉ.ವಿ/ಪಿ.ಆರ್/06/2022-23

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ.
ಕೋರಮಂಗಲ ಉಪವಿಭಾಗ,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು. ದಿನಾಂಕ: 02-06-2022

-: ಸಭೆ ತಿಳುವಳಿಕೆ ಪತ್ರ :-

ವಿಷಯ :- ಆಡುಗೋಡಿ ವಾರ್ಡ್ ಸಂಖ್ಯೆ.147ರ ವಾರ್ಡ್ ಮಟ್ಟದ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

ಉಲ್ಲೇಖ :- ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ...12(5)/ಪಿಆರ್/35/2020-21, ದಿನಾಂಕ:21-09-2020.

* * * * *

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶದ ರೀತ್ಯಾ ವಾರ್ಡ್ ಸಂಖ್ಯೆ.147(ಆಡುಗೋಡಿ) ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ **ದಿನಾಂಕ:04.06.2022** ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸಭೆಯು **ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಆಡುಗೋಡಿ, ಹೊಸೂರು ರಸ್ತೆ** (**ಕಾರ್ಯಪಾಲಕ ಅಭಿಯಂತರರ ಕಛೇರಿ**) ಇಲ್ಲಿ ಜರುಗಲಿದ್ದು, ಸದರಿ ಸಭೆಗೆ ವಾರ್ಡ್ ಸಮಿತಿ ಸದಸ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಲು ಕೋರಿದೆ ಹಾಗೂ ಸಭೆಗೆ ಗೈರು ಹಾಜರಾಗುವ ಅಧಿಕಾರಿಗಳ ಹೆಸರನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು.

**ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳು:** 1) ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ, 2) ಒಂಟಿಮನೆ ನಿರ್ಮಾಣದ ಫಲಾನುಭವಿಗಳ ಆಯ್ಕೆಯ ಬಗ್ಗೆ 3) ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ, 4) ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ, 5) ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ, 6) ಬೀದಿ ದೀಪಗಳ ನಿರ್ವಹಣೆ ಬಗ್ಗೆ, 7) ವಿದ್ಯುತ್ ಸರಬರಾಜು (ಬೆಸ್ಕಾಂ)ಗೆ ಸಂಬಂಧಿಸಿದ ವಿಷಯದ ಬಗ್ಗೆ ಹಾಗೂ ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ.

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 147, ಆಡುಗೋಡಿ

ರವರಿಗೆ,
ಸಂಬಂಧಪಟ್ಟ ಸದಸ್ಯರುಗಳು/ಅಧಿಕಾರಿಗಳು
ವಾರ್ಡ್ ಕಛೇರಿಯ ಬಿತ್ತಿ ಫಲಕ/ಪ್ರಕಟಿಸುವಿಕೆಗೆ/
ಸಾರ್ವಜನಿಕರ ಗಮನಕ್ಕೆ

ಪ್ರತಿಯನ್ನು:-

1. ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
3. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಂದಾಯ ಅಧಿಕಾರಿಗಳು, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಜಿ.ಟಿ.ಎಂ.ಲೇಔಟ್ ವಿಭಾಗ, ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
8. ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿ.ಬಿ.ಎಂ.ಪಿ (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ನಿರ್ದೇಶಕರು, ತೋಟಗಾರಿಕೆ, ಬಿ.ಬಿ.ಎಂ.ಪಿ. (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.

Scanned by CamScanner

Ward committee meeting Ward - 147, Adugodi

Date: 04/06/2022

Day: Saturday



| Sl. No | Name | Designation | Signature |
|---|---|---|---|
| 01. | Dr. Dhanya Kumar [Nodal Officer] | Chairman | 4/6/2022 |
| 02 | Smt. Manjula [Ex Corp] | Member | |
| 03 | Sri. Sampath [Ex corp] | Member | |
| 04 | Sri. A. M. Thyagaraj | Member | |
| 05 | Smt. V. Hemavathi | Member | |
| 06. | Smt. Rathnamma | Member | |
| 07 | Smt. Bhagya lakshmi | Member | |
| 08 | Sri. M. Gopal | Member | |
| 09 | Sri. B. D. Nagaraj | Member | |
| 10 | Sri. Ponapandiyan | Member | |
| 11 | Sri. Kemparaju | Member | |
| 12 | Chandrashekar [Ward-147] | Secretary. | |
| 13 | | | |

Scanned by CamScanner

| Sl. No | Name | Designation | Signature |
|---|---|---|---|
| 1. | Basavaraju H.S. | Revenue Inspector. W-147. | [signature] |
| 2. | Kalpana V | Sr H.I | [signature] V |
| 3. | Dr. Maruthi H. | MO. | [signature] |
| 4 | S. VIJAY KUMAR | W-147 Ti | [signature] |
| 5 | DURGA PRASAD. | W-147 JHI | [signature] |
| 6 | Subramani B C | W. 147 Marshal | [signature] B.C |
| 7 | Gangadri. S | ward no = 147. (Supervisor) | [signature] |
| 8 | Raghavendra Pujar | Warden 147 (SWM) | [signature] |
| 9 | Gajanan Akkimaradi | JE (BWSSB) | [signature] |
| 10 | ANNAPPA. L | 147 ward | [signature] L |
| 11. | venkatashivareddy | JE (BESCOM) | [signature] |

Scanned by CamScanner





Scanned by CamScanner

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಕೋರಮಂಗಲ ಉಪ-ವಿಭಾಗದ, ಆಡುಗೋಡಿ ವಾರ್ಡ್ ಸಂಖ್ಯೆ-147
## ದಿನಾಂಕ:04-06-2022 ರಂದು ಜೂನ್-2022 ರ ಮಾಹೆಯ
## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಡಾ॥ ಧನ್ಯಕುಮಾರ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ, (ಕಾರ್ಯಪಾಲಕ ಅಭಿಯಂತರರ ಕಛೇರಿ) ಆಡುಗೋಡಿಯಲ್ಲಿ ದಿನಾಂಕ:04.06.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ಸಂಪತ್
2. ಶ್ರೀ ಎಂ. ಗೋಪಾಲ್
3. ಶ್ರೀ ಬಿ.ಡಿ. ನಾಗರಾಜು
4. ಶ್ರೀ ಪಾಂಡಿಯನ್
5. ಶ್ರೀ ಕೆಂಪರಾಜು

**ಹಾಜರಿದ್ದ ಅಧಿಕಾರಿಗಳು:-**

1. ಡಾ॥ ಧನ್ಯಕುಮಾರ್, ನೋಡಲ್ ಅಧಿಕಾರಿಗಳು ವಾರ್ಡ್-147, ಆಡುಗೋಡಿ
2. ಶ್ರೀ ಚಂದ್ರಶೇಖರ್ .ಪಿ, ಕಾರ್ಯದರ್ಶಿ, ವಾರ್ಡ್ ಸಮಿತಿ ವಾರ್ಡ್-147, ಆಡುಗೋಡಿ
3. ಶ್ರೀ ಬಸವರಾಜು ಹೆಚ್.ಎಸ್., ಕಂದಾಯ ನಿರೀಕ್ಷಕರು, ವಾರ್ಡ್-147
4. ಶ್ರೀಮತಿ ಕಲ್ಪನಾ .ವಿ, ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
5. ಡಾ. ಮಾರುತಿ .ಹೆಚ್. ಆರೋಗ್ಯಾಧಿಕಾರಿಗಳು
6. ಶ್ರೀ ಎಸ್. ವಿಜಯ್ ಕುಮಾರ್, ತೆರಿಗೆ ನಿರೀಕ್ಷಕರು, ಬಿ.ಬಿ.ಎಂ.ಪಿ.
7. ಶ್ರೀ ದುರ್ಗಾ ಪ್ರಸಾದ್, ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
8. ಶ್ರೀ ಗಜಾನನ ಅಕ್ಕಿಮರಡಿ, ಕಿರಿಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
9. ಶ್ರೀ ವೆಂಕಟಾರೆಡ್ಡಿ, ಕಿರಿಯ ಅಭಿಯಂತರರು, ಬೆಸ್ಕಾಂ
10. ಶ್ರೀ ಗಂಗಾಧ್ರಿ .ಎಸ್., ಸೂಪರ್‌ವೈಸರ್
11. ಶ್ರೀ ರಾಘವೇಂದ್ರ ಪೂಜಾರ್
12. ಶ್ರೀ ಸುಬ್ರಮಣಿ .ಬಿ.ಸಿ., ಮಾರ್ಷಲ್

* * * * *

ಡಾ॥ ಧನ್ಯಕುಮಾರ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ ಹಾಗೂ ವಾರ್ಡ್‌ನ ಅಧಿಕಾರಿಗಳಿಗೆ ಸಭೆಗೆ ಸ್ವಾಗತಿಸಿ, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು ಮತ್ತು ಅಭಿವೃದ್ಧಿ ಕಾಮಗಾರಿಗಳ ಹಾಗೂ ಕೋವಿಡ್ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲು ಸೂಚಿಸಿದರು.



Scanned by CamScanner

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, ಸ್ಮಾರ್ಟ್ ವೋಟರ್ ಐ.ಡಿ. ಕಾರ್ಡ್‌ಗಳನ್ನು ಸಾರ್ವಜನಿಕರು ಪಡೆಯುವುದರ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ನೀಡುವಂತೆ ಹಾಗೂ ಇದರ ಬಗ್ಗೆ ಆಡುಗೋಡಿ ವ್ಯಾಪ್ತಿಯಲ್ಲಿ ಪ್ರಚಾರವನ್ನು ಮಾಡುವಂತೆ ಮತ್ತು ಕಛೇರಿಯ ಮುಂದೆ ಫ್ಲೆಕ್ಸ್‌ಗಳನ್ನು & ಬ್ಯಾನರ್‌ಗಳನ್ನು ಹಾಕುವುದು. ಮರಣ ಹೊಂದಿರುವ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, ಆಡುಗೋಡಿ ವ್ಯಾಪ್ತಿಯಲ್ಲಿ ಕಸ ಸಂಗ್ರಹಿಸುವವರು ಬೆಳಗ್ಗೆ 9.00 ಗಂಟೆಯ ಒಳಗಾಗಿ ಬರದೆ ಬೆಳಗ್ಗೆ 9.00 ರ ನಂತರ ಕಸ ಸಂಗ್ರಹಿಸಲು ಬರುತ್ತಿರುವುದರಿಂದ ಕೆಲಸಕ್ಕೆ ಹೋಗುವವರು ರಾತ್ರಿಯ ವೇಳೆಗಳಲ್ಲಿ ರಸ್ತೆಗಳಲ್ಲಿ ಕಸ ಎಸೆಯುತ್ತಿರುವುದರಿಂದ ಬ್ಲಾಕ್ ಸ್ಪಾಟ್‌ಗಳು ನಿರ್ಮಾಣವಾಗುತ್ತಿರುತ್ತವೆ. ಆದುದರಿಂದ ಕಸ ಸಂಗ್ರಹಣೆ ಕಾರ್ಯವನ್ನು ಸರಿಯಾದ ವೇಳೆಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಸಭೆಗೆ ತಿಳಿಸಿದರು.

ಶ್ರೀ ಪಾಂಡಿಯನ್ ಮತ್ತು ಶ್ರೀ ಗೋಪಾಲ್ ರವರು ಮಾತನಾಡಿ, ಆಡುಗೋಡಿ ವ್ಯಾಪ್ತಿಯಲ್ಲಿ ಕೆಲವು ವಿದ್ಯುತ್ ಕಂಬಗಳು ಬಾಗಿರುತ್ತದೆ ಹಾಗೂ ಕೆಲವು ಕಂಬಗಳು ಹಾನಿಗೊಂಡಿರುತ್ತವೆ. ಆದುದರಿಂದ ಮುಂದಾಗುವ ಅನಾಹುಗಳನ್ನು ತಪ್ಪಿಸುವ ದೃಷ್ಟಿಯಿಂದ ಹಾನಿಗೊಂಡಿರುವ ಹಾಗೂ ಬಾಗಿರುವ ಕಂಬಗಳನ್ನು ಸರಿಪಡಿಸುವಂತೆ ಸಭೆಗೆ ತಿಳಿಸಿದರು.

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, ಆಡುಗೋಡಿ ವ್ಯಾಪ್ತಿಯ ಪಾದಚಾರಿ ಬದಿಗಳಲ್ಲಿ ಬೆಳೆದಿರುವ ಹುಲ್ಲು ಮತ್ತು ಸಸಿಗಳನ್ನು ಪ್ರತಿ 15 ದಿನಗಳಿಗೊಮ್ಮೆ ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು ಹಾಗೂ ಇವುಗಳನ್ನು ತೆರವುಗೊಳಿಸಲು ಬೇಕಾದ ಉಪಕರಣಗಳನ್ನು ಕಾರ್ಮಿಕರಿಗೆ ಒದಗಿಸುವಂತೆ ಸಭೆಯಲ್ಲಿ ಕೋರಿದರು.

ನೋಡಾಲ್ ಅಧಿಕಾರಿಗಳು ಮಾತನಾಡಿ, ವಾರ್ಡ್‌ನಲ್ಲಿ 60 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಲಸಿಕೆಯನ್ನು ನೀಡುವ ಉದ್ದೇಶದಿಂದ ಶಿಬಿರವನ್ನು ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, 7ನೇ ಬ್ಲಾಕ್ ಕೋರಮಂಗಲ, ಪೆಟ್ರೋಲ್ ಬಂಕ್ ಹತ್ತಿರ ಮ್ಯಾನ್‌ಹೋಲ್ ಬ್ಲಾಕ್ ಆಗಿದ್ದು, ಚರಂಡಿಯ ನೀರು ಉಕ್ಕಿ ಹರಿಯುತ್ತಿರುತ್ತದೆ. ಇದರಿಂದಾಗಿ ಸಾರ್ವಜನಿಕರು ರಸ್ತೆಯಲ್ಲಿ ಸಂಚರಿಸಲು ತುಂಬಾ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಇದನ್ನು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, 7ನೇ ಬ್ಲಾಕ್ ಕೋರಮಂಗಲದಲ್ಲಿ ರಸ್ತೆ ದೀಪಗಳು ಅಗತ್ಯವಿದ್ದು, ಕೂಡಲೇ ಬೀದಿ ದೀಪಗಳನ್ನು ಅಳವಡಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ಮಳೆಗಾಲ ಸಮೀಪವಿರುವುದರಿಂದ ರಾಜೇಂದ್ರನಗರ ದಲ್ಲಿರುವ ರಸ್ತೆ ಚರಂಡಿಯಲ್ಲಿನ ಹೂಳುಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಕೋರಿದರು.

ಶ್ರೀ ಬಿ.ಡಿ. ನಾಗರಾಜು ರವರು ಮಾತನಾಡಿ, ಆಡುಗೋಡಿ ವ್ಯಾಪ್ತಿಯಲ್ಲಿರುವ ಉದ್ಯಾನವಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ. ಆದುದರಿಂದ ಉದ್ಯಾನವನಗಳ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು.



Scanned by CamScanner

ಶ್ರೀ ಗೋಪಾಲ್ ರವರು ಮಾತನಾಡಿ, ಕದಂಬ ಪಾರ್ಕ್, ಪೊಲೀಸ್ ಕ್ವಾಟ್ರಸ್‌ನಲ್ಲಿ ರಸ್ತೆ ದೀಪಗಳು ಇರುವುದಿಲ್ಲ. ಆದುದರಿಂದ ಈ ಸ್ಥಳದಲ್ಲಿ ರಸ್ತೆ ದೀಪಗಳನ್ನು ಅಳವಡಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, ಮರದಕೊಂಬೆಗಳು ತೆರವುಗೊಳಿಸುವಂತೆ ದೂರುಗಳನ್ನು ಸಲ್ಲಿಸಿದರೂ ಸಹ ಯಾವುದೇ ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಆದುದರಿಂದ ದೂರುಗಳನ್ನು ನೀಡಿದ ಕೂಡಲೇ ಸಮಸ್ಯೆಗಳನ್ನು ಬಗೆಹರಿಸಲು ಕ್ರಮಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್ .ಪಿ)
ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ–147 ಆಡುಗೋಡಿ ವಿಭಾಗ

(ಶ್ರೀ ಧನ್ಯಕುಮಾರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ–147, ಆಡುಗೋಡಿ



Scanned by CamScanner